# ಬ್ರಹ್ಮ ಬಾಯ್ಮಾತಲ್ಲ

◆ ಸ್ವಾಮಿ ಪುರುಷೋತ್ತಮಾನಂದ

ಶ್ರೀರಾಮಕೃಷ್ಣರೆಂದರು :
ಈ ಜಗದಲಿಹುದು ವಿದ್ಯಾಮಾಯೆ
ಈ ಜಗದಲಿಹುದು ಅವಿದ್ಯಾಮಾಯೆ
ಭಗವದನುರಕ್ತಿಯೇ ವಿದ್ಯಾಮಾಯೆ
ಕಾಮಕಾಂಚನಾಸಕ್ತಿಯೇ ಅವಿದ್ಯಾಮಾಯೆ
ಒಳ್ಳೆಯದೇನಿದೆಯೋ ಅದು ವಿದ್ಯಾಮಾಯೆ
ಕೆಟ್ಟದು ಏನಿದೆಯೋ ಅದು ಅವಿದ್ಯಾಮಾಯೆ
ವಿದ್ಯಾ-ಅವಿದ್ಯಾ ಮಾಯೆಯಿಂದ ಜೀವ ಸದಾ ಬಂಧಿತ
ನಿತ್ಯಶುದ್ಧನಾದ ಬ್ರಹ್ಮ ಎಂದಿಗೂ ನಿರ್ಲಿಪ್ತ!

ದೀಪದ ಬೆಳಕಿನಲೊಬ್ಬ ಓದುತಿಹನು ಭಾಗವತ
ಅದೇ ಬೆಳಕಿನಲಿನ್ನೊಬ್ಬ ಬರೆಯುತಿಹನು ಸುಳ್ಳು ಪತ್ರ
ಆದರೆ ಆ ದೀಪ ಮಾತ್ರ ನಿರ್ಲಿಪ್ತ
ಜೀವ ಮಾಯೆಯಿಂದ ಬಂಧಿತ
ಬ್ರಹ್ಮ ಸದಾ ಮಾಯಾತೀತ!

ಶ್ರೀರಾಮಕೃಷ್ಣರೆಂದರು:
ಬ್ರಹ್ಮವನು ಅರಿತೆವೆಂಬರು
ಅರಿಯಬಹುದೆ ಬ್ರಹ್ಮವನು?
ಇರುವೆಯೊಂದು ಹೋಯಿತು ಸಕ್ಕರೆಬೆಟ್ಟಕ್ಕೆ
ಮೊದಲು ಬಾಯಿ ಹಾಕಿಕೊಂಡು ಕಣಕ್ಕೆ! ಅರೆ!
ಹೊಟ್ಟೆ ತುಂಬಿಕೊಂಡಿತು ಅಷ್ಟಕ್ಕೇ!
ಇನ್ನೊಂದು ಕಣವ ಕಚ್ಚಿಕೊಂಡು ನಡೆಯಿತು ಗೂಡಿನೆಡೆಗೆ
ನಡೆವಾಗ ಯೋಚಿಸಿತು ಮನದೊಳಗೆ:
ಮುಂದಿನ ಸಲ ಬಂದಾಗ ಇಡೀ ಬೆಟ್ಟವನೇ
ಹೊತ್ತೊಯ್ಯುವೆ ನನ್ನ ಗೂಡಿಗೆ!
ಹಲವರು ಬ್ರಹ್ಮವನರಿವ ಬಗೆ ಹೀಗೆ!

ಮನುಷ್ಯ ಎಂಥಾ ಮಹಾತ್ಮನೇ ಆದರೂ
ಅನಂತನಾದ ಪರಮಾತ್ಮನನು
ಎಷ್ಟು ಮಹಾ ಅರಿತಾನು?
ಶುಕಮಹರ್ಷಿಯಂಥವನೂ ಹೆಚ್ಚೆಂದರೆ
ಸಕ್ಕರೆಬೆಟ್ಟದ ಎಂಟು ಹತ್ತು ಕಣಗಳನು
ಕಚ್ಚಿಕೊಂಡು ಬಂದಾನು!

ಶ್ರೀರಾಮಕೃಷ್ಣರೆಂದರು:
ಬ್ರಹ್ಮವನು ಅರಿತವನಾರು ಬಲ್ಲೆಯಾ?
ಕೇಳೊಂದು ಕಥೆಯ :
ತಂದೆಯೊಬ್ಬ ತನ್ನಿಬ್ಬರು ಪುತ್ರರನು
ಕಳಿಸಿದನು ಗುರುಕುಲಕೆ
ಬ್ರಹ್ಮವಿದ್ಯೆಯ ಕಲಿಯಲಿಕೆ
ಕೆಲವರ್ಷಗಳೇ ಕಳೆದುವು ಅಧ್ಯಯನ ಸಾಧನೆಗಳಲಿ
ಈಗ ಹಿಂದಿರುಗಿ ಬಂದು ತಂದೆಗೆ ಪ್ರಣಾಮಗೈದು
ಸಮ್ಮುಖದಲಿ ನಿಂದಿಹರು ಆನಂದದಲಿ.
ತಂದೆ ಪ್ರಶ್ನಿಸಿದ ಹಿರಿಯ ಪುತ್ರನನು:
"ಪ್ರಿಯ ಪುತ್ರ, ಬ್ರಹ್ಮವನು ಅರಿತು ಬಂದಿಹೆ ನೀನು
ಪೇಳೆನಗೆ ಆ ಬ್ರಹ್ಮದ ಸ್ವರೂಪವನು!"
ಪಾಂಡಿತ್ಯದಿಂದ ಬೀಗಿದ ಪುತ್ರ ವೇದಗಳಿಂದ
ಶ್ಲೋಕಗಳನ್ನು ಎತ್ತಿ ಎತ್ತಿ ಬಣ್ಣಿಸಿದ ಹೆಮ್ಮೆಯಿಂದ
ತಂದೆ ಶಾಂತವಾಗಿ ಆಲಿಸಿದ.
ಈಗ ಎರಡನೇ ಪುತ್ರನನ್ನು ಕೇಳಿದ:
"ಪ್ರಿಯ ಪುತ್ರ, ನೀನೇನ ಅರಿತೆ ಬ್ರಹ್ಮದ ಸ್ವರೂಪವನು?"
ಈ ಪುತ್ರ ಮಾತ್ರ ನೆಲದೆಡೆಗೆ ದಿಟ್ಟಿಸುತ
ಮೌನವಾಗಿ ನಿಂದ, ಮಾತೇ ಇಲ್ಲ!
ಇದೇಕೆ ಹೀಗೆ? ಅಧ್ಯಯನ ಮಾಡಲೇ ಇಲ್ಲವೇ ಹೇಗೆ?
ಇಲ್ಲ, ಇಲ್ಲ. ಅವನು ಬಾಯ್ತೆರೆಯದಿದ್ದರೂ
ಮುಖ ಅರಳಿದೆ, ಪ್ರಫುಲ್ಲವಾಗಿದೆ.
ತಂದೆ ನೋಡಿದ, ಸಂತುಷ್ಟನಾಗಿ ಇಂತೆಂದ:
ಮಗು, ಬ್ರಹ್ಮವೆಂದರೇನೆಂಬುದು
ಸ್ವಲ್ಪವಾದರೂ ಅರ್ಥವಾಗಿದೆ ನಿನಗೆ!
ಆದ್ದರಿಂದಲೇ ಈ ಸಾರ್ಥಕ ಮೌನ, ದಿವ್ಯ ಮೌನ!
ನಿಜ, ಬ್ರಹ್ಮ ಏನೆಂಬುದನು ಹೇಳಬಲ್ಲವರಿಲ್ಲ!
*ಏಕೆಂದರೆ, ಬ್ರಹ್ಮ ಬಾಯ್ಮಾತಲ್ಲ!*



ಪೂಜ್ಯ ಸ್ವಾಮಿ ಪುರುಷೋತ್ತಮಾನಂದಜಿಯವರು ತಾವು ದೈವಾಧೀನರಾಗುವುದಕ್ಕೆ ಸ್ವಲ್ಪ ದಿನಗಳ ಹಿಂದೆ ಈ ಕವನವನ್ನು ಬರೆದು ಕಳಿಸಿದ್ದರು. ಶ್ರೀರಾಮಕೃಷ್ಣರ ದೃಷ್ಟಾಂತ ಕಥೆಗಳನ್ನು ಆಧರಿಸಿ ಅವರು ರಚಿಸಿದ ಕವನಸಂಕಲನ 'ಕಥಾಮೃತ' ಇದೀಗ ಬಿಡುಗಡೆಯಾಗಿದೆ.

# ಸ್ಪಂದನಪ್ರಭ

ಪೂಜ್ಯರೇ,

ಶ್ರೀರಾಮಕೃಷ್ಣ ಆಶ್ರಮದ ಮಾಸಪತ್ರಿಕೆ 'ವಿವೇಕಪ್ರಭ' ಅಧ್ಯಾತ್ಮಿಕ ವಿಚಾರಗಳಲ್ಲಿ ಭಕ್ತಿಶ್ರದ್ಧೆ ಇರುವಂತಹ ಅಸಂಖ್ಯಾತ ಓದುಗ ಬಂಧುಗಳಿಗೆ ನಿಜಕ್ಕೂ ಮಾರ್ಗದರ್ಶಕ ದಾರಿದೀಪದಂತಿದೆ. ಪ್ರತಿ ಸಂಚಿಕೆಯೂ ಯುವಜನಾಂಗಕ್ಕೆ ಮಾರ್ಗದರ್ಶನ ನೀಡುವ ಆಧ್ಯಾತ್ಮಿಕ ಲೇಖನಗಳಿಂದ ಜ್ಞಾನದ ನಿಧಿಯೆನಿಸಿದೆ. ಕಳೆದ ಹಲವು ವರ್ಷಗಳಿಂದ ಈ ಪತ್ರಿಕೆಯ ನಿತ್ಯಓದುಗರಲ್ಲಿ ನಾನೂ ಒಬ್ಬನಾಗಿದ್ದೇನೆ. ಈಚೆಗೆ ಈ ಪತ್ರಿಕೆಗೆ ಮೂರು ವರ್ಷಗಳ ಚಂದಾದಾರನೂ ಆಗಿರುವೆನು.

ಕಳೆದ ಕೆಲವು ವರ್ಷಗಳಿಂದ ಕನ್ನಡದ ಜನಪ್ರಿಯ ಡೈಜೆಸ್ಟ್ ಎನಿಸಿರುವ 'ಕಸ್ತೂರಿ' ಯನ್ನು ನಾನು ನಿರ್ವಹಿಸುತ್ತಿರುವೆನು. ನನ್ನ ಆರಾಧ್ಯ ದೇವರು ಶ್ರೀರಾಮಕೃಷ್ಣ ಪರಮಹಂಸರು, ಮಾತೆ ಶಾರದಾ ದೇವಿ, ಸ್ವಾಮಿ ವಿವೇಕಾನಂದರು... ಪೂಜ್ಯರೇ, ನಿಮ್ಮ 'ವಿವೇಕಪ್ರಭ' ಪತ್ರಿಕೆಯಿಂದ ಆಯ್ದ ಕೆಲವು ಬರಹಗಳನ್ನು ಪ್ರತಿ ತಿಂಗಳೂ 'ಕಸ್ತೂರಿ' ಯಲ್ಲಿ ಬಳಸಿಕೊಳ್ಳುವ ಅಪೇಕ್ಷೆ ಇದೆ. ಅದು ಕರ್ನಾಟಕದ ಸಹಸ್ರಾರು ಯುವಜನತೆಗೆ ಮಾರ್ಗದರ್ಶನ ನೀಡುವಂತಾಗಬೇಕು ಎಂಬುದು ನಮ್ಮ ಅಪೇಕ್ಷೆ. ಈ ರೀತಿ ಲೇಖನಗಳನ್ನು ಬಳಸಿಕೊಳ್ಳಲು ತಾವು ದಯವಿಟ್ಟು ಅನುಮತಿ ನೀಡಬೇಕೆಂದು ವಿನಮ್ರತೆಯಿಂದ ಪ್ರಾರ್ಥಿಸುತ್ತಿದ್ದೇನೆ.

—ಅರುಣ ನಾರಾಯಣ, ಸಂಪಾದಕ, ಕಸ್ತೂರಿ,
ಲೋಕ ಶಿಕ್ಷಣ ಟ್ರಸ್ಟ್ ಪ್ರಕಾಶನ, ಹುಬ್ಬಳ್ಳಿ

ಪ್ರತಿ ತಿಂಗಳೂ ನಿಮ್ಮ ಪತ್ರಿಕೆ ಅಭ್ಯಾಸ ಮಾಡುತ್ತಿದ್ದೇನೆ. ಚೆನ್ನಾದ ಲೇಖನಗಳನ್ನು ನಮ್ಮ ಪತ್ರಿಕೆಗೆ ಆಯ್ದುಕೊಳ್ಳುತ್ತೇನೆ. ಸ್ನೇಹ ವಿಶ್ವಾಸ ಬೆಳೆಯಲಿ. —'ಹಳ್ಳಿಯ ಸಂದೇಶ' ಕಾರ್ಯಾಲಯ, ಬೆಳಗಾವಿ

ನೀವು ಕಳಿಸಿದ ಜನವರಿ ೨೦೦೫ರ 'ವಿವೇಕಪ್ರಭ' ತಲುಪಿತು. ಶ್ರೀ ಕುವೆಂಪು ಜನ್ಮಶತಾಬ್ದಿ ವಿಶೇಷ ಸಂಚಿಕೆ ಪ್ರಕಟಿಸಿ, ಸಂಸ್ಥೆ ಸಾರ್ಥಕಪಡಿಸಿಕೊಂಡಿದೆ. ಪ್ರಕೃತಿಯ ಮಡಿಲಲ್ಲಿ ಈಜಾಡಿ, ನಿಸರ್ಗವನ್ನೇ ತನ್ನ ಉಸಿರಾಗಿಸಿಕೊಂಡು, ಬರವಣಿಗೆಯ ಬಸಿರಲ್ಲಿ ಅಗಾಧವಾದ ಪಾಂಡಿತ್ಯ, ಅಧ್ಯಾತ್ಮ, ದರ್ಶನ ಸಾಹಿತ್ಯವನ್ನು, ಕಾವ್ಯ ರೂಪದಲ್ಲೂ ಹೆಣೆದು ಮೈಮರೆತ ಮಹಾಕವಿ ಕುವೆಂಪು ಅವರನ್ನು ಎಷ್ಟು ನೆನೆದರೂ ಸಾಲದು.

—ನಾ.ಮ. ಬಸವರಾಜ ಶಾಸ್ತ್ರಿ, ನಾಗರಹಾಳು, ಬಳ್ಳಾರಿ.

ರಾಷ್ಟ್ರಕವಿ ಕುವೆಂಪು ಅವರ ಜನ್ಮಶತಾಬ್ದಿಯ ನೆನಪಿನ ಕಾಣಿಕೆಯಾಗಿ ರಾಮಕೃಷ್ಣ ಮಹಾಸಂಘವು ಹೊರತಂದಿರುವ ಈ ಬಾರಿಯ 'ವಿವೇಕಪ್ರಭ' ವಿಶೇಷಾಂಕ (ಜನವರಿ ೨೦೦೫) ಭಾವಪೂರ್ಣವಾಗಿ ಮೂಡಿಬಂದಿರುವುದು ಸಂತಸದ ಸಂಗತಿ. ಇಲ್ಲಿನ ಪ್ರತಿಯೊಂದು ಲೇಖನವೂ ಓದಲು ಸ್ವಾರಸ್ಯಕರವಾಗಿದ್ದು, ಕುವೆಂಪು ಬಗೆಗಿನ ಕೆಲವು ಮಹತ್ವದ ವಿಚಾರಗಳನ್ನು ಅರಿಯಲು ಪೂರಕವಾಗಿದ್ದವು. ಕುವೆಂಪು ತಮ್ಮ ತಾರುಣ್ಯದಲ್ಲಿ ಯುವಜನರಿಗೆ ನೀಡಿದ ಉಪನ್ಯಾಸ ಹಾಗೂ ಅವರ ಹಾಸ್ಯಪ್ರಜ್ಞೆ, ಸಾಮಾಜಿಕ ಕಳಕಳಿ ಮುಂತಾದ ಹಲವಾರು ವಿಷಯಗಳು ಮನಸ್ಸಿಗೆ ಮುದ ನೀಡಿದವು. ಪ್ರತಿಯೊಂದು ಲೇಖನವನ್ನು ಓದಿದ ನಂತರವೆ ತಿಳಿಯುವುದು ಒಳಗಿನ ಹೂರಣದ ರುಚಿ. ಕುವೆಂಪು ಅವರಿಗೂ ರಾಮಕೃಷ್ಣ ಆಶ್ರಮಕ್ಕೂ ಇದ್ದಂತ ಅವಿನಾಭಾವ ಸಂಬಂಧ ನಿಜಕ್ಕೂ ಅವರಲ್ಲಿನ ಭಕ್ತಿಯ ದ್ಯೋತಕವೇ ಸರಿ. ರಾಮಕೃಷ್ಣ ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರ ಜೀವನಚರಿತ್ರೆ ಬರೆದು ವಚನವೇದವನ್ನು ಇಡೀ ಜಗತ್ತಿಗೆ ಪರಿಚಯಿಸಿದ ಕೀರ್ತಿ ಅವರದು. —ಡಿ.ಎಸ್. ಕೃಷ್ಣಾಚಾರ್ಯ, ಮೈಸೂರು

ಡಿಸೆಂಬರ್ ೨೦೦೪ರಲ್ಲಿ ಪ್ರಕಟವಾದ 'ವಿವೇಕಪ್ರಭ' ದ ಶ್ರೀ ಕುವೆಂಪು ಜನ್ಮಶತಾಬ್ದಿ ವಿಶೇಷಾಂಕ ನನ್ನ ಮನ ಸೂರೆಗೊಂಡಿದೆ. ಕುವೆಂಪು ಅವರ ಜೀವನದ ಹಾದಿಯನ್ನು ಸಂಕ್ಷಿಪ್ತವಾಗಿ, ಸ್ಪಷ್ಟವಾಗಿ ಮತ್ತು ಸ್ವಾರಸ್ಯವಾಗಿ ಪ್ರಕಟಿಸಿದ್ದಕ್ಕೆ ಧನ್ಯವಾದಗಳು. ಇದೇ ರೀತಿ, ಮಹಾನ್ ಮೇರುವ್ಯಕ್ತಿಗಳ ಜನ್ಮದಿನದಂದು ಇಂತಹ ವಿಶೇಷಾಂಕಗಳು ಮೂಡಿಬರಲಿ. —ಬಿ.ಜೆ. ಪಾರ್ಶ್ವನಾಥ್ ಜೈನ್, ಬೆಳಗುಲಿ.

ನನ್ನ ಗೆಳೆಯ 'ವಿವೇಕಪ್ರಭ' ವನ್ನು ಪ್ರತಿ ತಿಂಗಳೂ ಅಂಚೆ ಮೂಲಕ ಪಡೆಯುತ್ತಿದ್ದಾನೆ. ನನಗೂ ಕೂಡ ಓದಲು ಕೊಡುತ್ತಾನೆ. ಸೊಗಸಾದ ಲೇಖನಗಳಿಂದ ಪತ್ರಿಕೆ ಬಹಳ ಚೆನ್ನಾಗಿ ಮೂಡಿಬರುತ್ತಿದೆ.

—ತಿಪ್ಪಣ್ಣ, ಯು. ಕೋಲಿ,ಬಾಗಲಕೋಟೆ.

ಜನವರಿ ೨೦೦೫ರ 'ವಿವೇಕಪ್ರಭ' ವಿಶೇಷಾಂಕದ ತುಂಬ ಅಪರೂಪ ಚಿತ್ರಗಳು ಹಾಗೂ ಅರ್ಥಪೂರ್ಣ ಲೇಖನಗಳು ನಮ್ಮ ಮನಕ್ಕೆ ಮುದ ಕೊಟ್ಟಿವೆ. ಕವಿ ಕುವೆಂಪು ಅವರ ವ್ಯಕ್ತಿತ್ವದ ವಿಶಿಷ್ಟ ಚಿತ್ರಣ ಬೋಧಪ್ರದವಾಗಿತ್ತು. ನನಗಂತೂ ಈ ಪತ್ರಿಕೆಯನ್ನು ಹೊರತರುತ್ತಿರುವ ಮಹಾಸಂಘದ ಸಂಸ್ಕೃತಿ ಪ್ರಸಾರದ ಮಹತ್ಕಾರ್ಯವನ್ನು ಅರಿತು ಆನಂದಬಾಷ್ಪ ಸುರಿಸಿದೆ. —ಸರಸ್ವತಿ.... (L.736)

'ವಿವೇಕಪ್ರಭ' ಒಂದು ಸ್ಫೂರ್ತಿದಾಯಕ ಆಶಾಕಿರಣವಾಗಿ ಮೂಡಿಬರುತ್ತಿರುವ ಪತ್ರಿಕೆ. ನಾನು ಪ್ರಾರಂಭದಿಂದಲೂ ಅಂದರೆ ಜನವರಿ ೨೦೦೦ದಿಂದ ಓದುತ್ತಿದ್ದೇನೆ. ಮೊದಲು ವಾರ್ಷಿಕ ಚಂದಾದಾರನಾಗಿದ್ದೆ. ಈಗ ತ್ರೈವಾರ್ಷಿಕ ಚಂದಾದಾರನಾಗಿದ್ದೇನೆ. ಪತ್ರಿಕೆಯಲ್ಲಿನ ವಿಚಾರಗಳಿಂದ ನನ್ನ ಮನಸ್ಸಿನಲ್ಲಿ ಶಾಂತಿ, ನೆಮ್ಮದಿ ಮತ್ತು ಪ್ರೇಮ ವಾತ್ಸಲ್ಯಗಳು ಹೆಚ್ಚಿವೆ. ನಾನು ನನ್ನ ಮಿತ್ರರಿಗೂ ಈ ಪತ್ರಿಕೆಗೆ ಚಂದಾದಾರರಾಗಿರೆಂದು ಹೇಳುತ್ತಿದ್ದೇನೆ.

—ಹೆಚ್. ವಿ. ಗಂಚೇಗೌಡ, ಬೆಂಗಳೂರು.

ಫೆಬ್ರವರಿ ೨೦೦೫ರ 'ವಿವೇಕಪ್ರಭ' ದಲ್ಲಿ ಪ್ರಕಟವಾದ 'ಸ್ವಾಮಿ ವಿವೇಕಾನಂದರ ಮಾತೃಪ್ರೇಮ' ವನ್ನು ಬರೆದಿರುವ ಕುಮಾರಿ ಉಷಾ ಅವರಿಗೆ ಧನ್ಯವಾದಗಳು. ನಾನು ಆ ಶೀರ್ಷಿಕೆಯನ್ನು ಅದೆಷ್ಟುಬಾರಿ ಓದಿದೆನೋ ನನಗೇ ಗೊತ್ತಿಲ್ಲ. ಸ್ವಾಮಿಜಿಯವರು ಶ್ರೀಮಾತೆ ಶಾರದಾದೇವಿಗೆ ಕೊಟ್ಟಿದ್ದ ಸ್ಥಾನ, ಭಾರತಮಾತೆಗೆ ನೀಡಿದ್ದ ಸ್ಥಾನ, ಜನ್ಮದಾತೆಗೆ ನೀಡಿದ್ದ ಸ್ಥಾನ ವಿಶಿಷ್ಟವಾದುದು. ಅವರ ಈ ಭಕ್ತಿಗೆ ನಾನು ನಮಸ್ಕರಿಸುತ್ತೇನೆ. ನಿಜಕ್ಕೂ 'ರತ್ನಗರ್ಭಾನಾರಿ ರತ್ನಪ್ರಸವಿಲೋ...' ರತ್ನದಂತಹ ಮಗನನ್ನು ಹಡೆದ ತಾಯಿ ಭುವನೇಶ್ವರಿ ದೇವಿಗೆ ನಮೋ ನಮಃ. ದಯವಿಟ್ಟು 'ಬಿಲೂ' ನ ಬಾಲ್ಯದ ತುಂಟಾಟಗಳಿದ್ದರೆ ಇನ್ನೂ ಪ್ರಕಟಿಸಿ. ತಾಯಿ-ಮಗನ ಸಂಭಾಷಣೆಯಿದ್ದರೆ ಅಂತಹ ಪ್ರಸಂಗಗಳನ್ನು ಪ್ರಕಟಿಸಿ. ಸ್ವಾಮಿ ಪುರುಷೋತ್ತಮಾನಂದರು ಬರೆದಿರುವ 'ಆಪದ್ಬಾಂಧವ' ತುಂಬಾ ಚೆನ್ನಾಗಿದೆ. ಈ ರೀತಿಯ ನರೇಂದ್ರನ ಜೀವನದಲ್ಲಿನ ಘಟನೆಗಳು ಇನ್ನೂ ಇದ್ದರೆ ದಯವಿಟ್ಟು ಪ್ರಕಟಿಸಿ.

—ಪದ್ಮಿನಿ ರಾಜ್, ಮಲ್ಲೇಶ್ ಪಾಳ್ಯ, ಬೆಂಗಳೂರು.